O.S .No. 130/2020
PW-1

ದಿನಾಂಕ: 19.04.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಸ್.ಎಲ್.ಜಿ. ವಕೀಲರಿಂದ

ನನ್ನ ತಂದೆಯ ಹೆಸರು ರಂಗಾಚಾರಿ. ನನ್ನ ತಂದೆಗೆ ಇಬ್ಬರು ಗಂಡು ಮಕ್ಕಳು. ಅವರುಗಳೆಂದರೆ ಕೃಷ್ಣಾಚಾರಿ ಮತ್ತು ಸುರೇಶಚಾರಿ. ರಂಗಾಚಾರ್ಯ ಎಂದರೆ ನಿಮ್ಮ ತಂದೆ ಅಲ್ಲ ಎಂದರೆ ಸಾಕ್ಷಿ ರಂಗಾಚಾರ್ಯ ಮತ್ತು ರಂಗಾಚಾರಿ ಎಂದು ಎರಡೂ ಹೆಸರಿನಿಂದ ಕರೆಯುತ್ತಾರೆ ಎಂದು ಹೇಳುತ್ತಾರೆ. ರಂಗಾಚಾರ್ಯ ಮತ್ತು ರಂಗಾಚಾರಿ ಎರಡೂ ನಿಮ್ಮ ತಂದೆ ಹೆಸರು ಎಂದು ತೋರಿಸಲು ದಾಖಲಾತಿ ಇದೆಯೇ ಎಂದರೆ ಸಾಕ್ಷಿ ಇದೆ ಎಂದು ಹೇಳುತ್ತಾರೆ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಗುರುತಿನ ಚೀಟಿಯಲ್ಲಿ ರಂಗಾಚಾರ್ಯ ಎಂದು ನಮೂದು ಇದೆಯಾ ಎಂದರೆ ಸಾಕ್ಷಿ ರಂಗಾಚಾರಿ ಎಂದು ಇದೆ ಎಂದು ಹೇಳುತ್ತಾರೆ.

ನಾನು ಅನಕ್ಷರಸ್ಥ. ನನಗೆ ಓದಲು, ಬರೆಯಲು ಬರುವುದಿಲ್ಲ, ಸಹಿ ಮಾತ್ರ ಮಾಡುತ್ತೇನೆ. ನನ್ನ ತಮ್ಮನೂ ಅನಕ್ಷರಸ್ಥ. ನನ್ನ ತಂದೆ 2010 ರಲ್ಲಿ ಮೃತಪಟ್ಟರು. ನನ್ನ ತಂದೆ ಬದುಕಿದ್ದಾಗ ಮನೆಯ ಯಜಮಾನಿಕೆ ಮಾಡುತ್ತಿದ್ದು, ಅವರು ಮೃತಪಟ್ಟ ನಂತರ ನಾನು ಮಾಡುತ್ತಿದ್ದೇನೆ ಎಂದು ಹೇಳುತ್ತಾರೆ.

ನಿಮ್ಮ ತಂದೆ ಯಾರಿಂದ ಯಾವಾಗ, ಎಷ್ಟು ಗುಂಟೆ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ಸಾಕ್ಷಿ 1976 ರಲ್ಲಿ ಚಿಕ್ಕಹೈದ ಎಂಬುವವರಿಂದ 5 ಗುಂಟೆ ಜಮೀನನ್ನು ಖರೀದಿ ಮಾಡಿದ್ದರು ಎಂದು ಹೇಳುತ್ತಾರೆ. 1976 ರಲ್ಲಿ ನಿಮಗೆ ಎಷ್ಟು ವಯಸ್ಸೆಂದರೆ ಸಾಕ್ಷಿ 8-9 ವರ್ಷ ಎಂದು ಹೇಳುತ್ತಾರೆ.

ದಾವೆ ಹೂಡಲು ಮಾಹಿತಿಯನ್ನು ವಕೀಲರಿಗೆ ನಾವೇ ನೀಡಿರುತ್ತೇವೆ. ಕ್ರಯ ಪತ್ರ ನೊಂದಣಿಯಾಗಿದೆ. ನಿಪಿ-1 ರಂತೆ ಕ್ರಯ ಪತ್ರವನ್ನು ಯಾರು ಬರೆದಿದ್ದು ಹಾಗೂ ಸಾಕ್ಷಿಗಳಾಗಿ ಯಾರು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಚಿಕ್ಕಹೈದ ರವರ ತಂದೆ ಹೆಸರು ಏನು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಚಿಕ್ಕಹೈದ ರವರ ತಂದೆ ಹೆಸರು ಕಾಳೇಗೌಡ @ ಪುಟ್ಟಕಾಳೇಗೌಡ ಎಂದರೆ ಸರಿ.

ನಿಪಿ-1 ರಂತೆ ಕ್ರಯದ ಆಸ್ತಿಯನ್ನು ಎಷ್ಟು ರೂ. ಗಳಿಗೆ ಖರೀದಿ ಮಾಡಿರುತ್ತಾರೆಂರೆ ಸಾಕ್ಷಿ ಗೊತ್ತಿಲ್ಲ  ಎಂದು ಹೇಳುತ್ತಾರೆ. ದಾವಾ ಆಸ್ತಿಯ ಚೆಕ್ಕುಬಂಧಿ ಗೊತ್ತಾ ಎಂದರೆ ಸಾಕ್ಷಿ ಗೊತ್ತು  ಎಂದು ಹೇಳುತ್ತಾರೆ. 1976 ರಲ್ಲಿ ದಾವಾ ಆಸ್ತಿಯ ಪಹಣಿ ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ಚಿಕ್ಕಹೈದ ರವರ ಹೆಸರಿನಲ್ಲಿತ್ತು  ಎಂದು ಹೇಳುತ್ತಾರೆ. 1976 ರ ದಾವಾ ಆಸ್ತಿಯ ಸಂಬಂಧ ಪಹಣಿಯನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ  ಎಂದು ಹೇಳುತ್ತಾರೆ.

ನಿಪಿ-1 ರಲ್ಲಿ ಬರೆದಿರುವ ಒಕ್ಕಣೆ ಗೊತ್ತಾ ಎಂದರೆ ಸಾಕ್ಷಿ ಇಲ್ಲ  ಎಂದು ಹೇಳುತ್ತಾರೆ. ದಾವಾ ಆಸ್ತಿಯ ಸ್ವಾಧೀನದಲ್ಲಿ ನಾನೇ ಇದ್ದೇನೆ. ನೀವು 1976 ರಿಂದ ದಾವಾ ಆಸ್ತಿಯಲ್ಲಿ ಸ್ವಾಧೀನ ಇರುವ ಬಗ್ಗೆ ನಿಪಿ-1 ನ್ನು ಹೊರತುಪಡಿಸಿ ಬೇರೆ ದಾಖಲಾತಿ ಇದೆಯೇ ಎಂದರೆ ಸಾಕ್ಷಿ ನಿಪಿ-1 ಮಾತ್ರ ಇದೆ  ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ನೀವು ಸ್ವಾಧೀನ ಇರುವ ಬಗ್ಗೆ ನೋಡಿದವರು ಇದ್ದಾರಾ ಎಂದರೆ ಸಾಕ್ಷಿ ನನಗೆ ಹೇಳಲಾಗುವುದಿಲ್ಲ  ಎಂದು ಹೇಳುತ್ತಾರೆ.

ದಾವಾ ಆಸ್ತಿ ಖಾತೆಯಾಗಿಲ್ಲದ ವಿಚಾರ ನಿಮಗೆ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿ ನನ್ನ ತಂದೆ 2010 ರಲ್ಲಿ ಮೃತಪಟ್ಟಿದ್ದು, 2010 ರ ನಂತರ ಖಾತೆ ಮಾಡಿಸಲು ಹೋದಾಗ ಗೊತ್ತಾಯಿತು  ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿ ಇದೆಯಾ ಎಂದರೆ ಸಾಕ್ಷಿ 2 ಎಕರೆ ಜಮೀನು ಇದೆ  ಎಂದು ಹೇಳುತ್ತಾರೆ.

ನಿಪಿ-1 ರಲ್ಲಿ ಚಿಕ್ಕಹೈದೇಗೌಡ  ಬಿನ್ ದೊಡ್ಡಕಾಳೇಗೌಡ ಎಂದು ನಮೂದು ಇದೆ ಎಂದರೆ ಸರಿ. ನಿಪಿ-1 ರಲ್ಲಿ ಕಾಳಾಚಾರ್ಯ ರವರ ಮಗ ರಂಗಾಚಾರ್ಯ ಎಂದು ನಮೂದು ಇದೆ ಎಂದರೆ ಸರಿ. ನಿಪಿ-1 ಕ್ಕೂ ಹಾಗೂ ದಾವಾ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ 1990 ರಿಂದಲೂ ಸರ್ಕಾರದವರು ಉಚಿತವಾಗಿ ಮನೆ ಬಾಗಿಲಿಗೆ ಬಂದು ಪಹಣಿ ಕೊಡುತ್ತಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ  ಎಂದು ಹೇಳುತ್ತಾರೆ. ಸ.ನಂ.14 ಕ್ಕೂ ಹಾಗೂ ದಾವಾ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ಸ.ನಂ.15 ರಲ್ಲಿ ನಾವು ಇರುವುದು  ಎಂದು ಹೇಳುತ್ತಾರೆ. ದಾವಾ ಆಸ್ತಿ 1 ಎಕರೆ 23 ಗುಂಟೆ ಜಮೀನು ವ್ಯವಸಾಯದ ಜಮೀನು, ಹಿತ್ತಲಲ್ಲ ಎಂದರೆ ಸಾಕ್ಷಿ 1 ಎಕರೆ 23 ಗುಂಟೆ ಪೈಕಿ 5 ಗುಂಟೆ ಬರೆದುಕೊಟ್ಟಿದ್ದಾರೆ  ಎಂದು ಹೇಳುತ್ತಾರೆ. ನಿಪಿ-1 ರಲ್ಲಿ 1 ಎಕರೆ 23 ಗುಂಟೆ ಪೈಕಿ 5 ಗುಂಟೆ ಎಂದು ನಮೂದು ಇದೆಯೇ ಎಂದರೆ ಸಾಕ್ಷಿ ಹೌದು  ಎಂದು ಹೇಳುತ್ತಾರೆ.

2010 ರಲ್ಲಿ ನಿಮ್ಮ ತಂದೆ ಮೃತಪಟ್ಟ ನಂತರ ನ್ಯಾಯಾಲಯಕ್ಕೆ ದಾವೆ ಹೂಡಿ ಪರಿಹಾರ ಕೇಳಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ತೊಂದರೆ ಇದ್ದಿದ್ದಕ್ಕೆ ಅರ್ಜಿ ಹಾಕಿದ್ದು ಎಂದು ಹೇಳುತ್ತಾರೆ. ನೀವು ಖಾತೆ ಮಾಡುವಂತೆ ಕೋರಿ 2022 ರಲ್ಲಿ ಉಪವಿಭಾಗಾಧಿಕಾರಿ ರವರ ಸಮಕ್ಷಮ ಅರ್ಜಿ ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ದಿನಾಂಕ ಗೊತ್ತಿಲ್ಲ, ಹಾಕಿದ್ದೇನೆ ಎಂದು ಹೇಳುತ್ತಾರೆ.

**( ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.